# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ಅ/ವಾರ್ಡ್ ಸಭೆ/193/ಸಭೆ-6/2020-21 ದಿನಾಂಕ: 19.12.2020.

## ಅರಕೆರೆ ವಾರ್ಡ್ ನಂ 193ರಲ್ಲಿ ನಡೆದ ವಾರ್ಡ್ ಸಭೆಯ ನಡಾವಳಿಗಳು

ದಿನಾಂಕ 19.12.2020 ರಂದು ಅರಕೆರೆ ಉಪವಿಭಾಗದ ವಾರ್ಡ್ ನಂ 193 ರ ಅರಕೆರೆ ವ್ಯಾಪ್ತಿಯ ಅರಕೆರೆ ಮೈಕೋ ಬಡಾವಣೆಯ ಸಮುದಾಯ ಭವನದಲ್ಲಿ ಶ್ರೀ ರಮೇಶ್. ಎನ್. ಮುಖ್ಯ ಅಭಿಯಂತರರು) ನೋಡಲ್ ಅಧಿಕಾರಿಗಳು, ಅರಕೆರೆ ವಾರ್ಡ್ ನಂ 193 ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡಾವಳಿ.

ಹಾಜರಿದ್ದವರು.

| ಕ್ರಮ ಸಂ | ಸದಸ್ಯರ ಹೆಸರು | ಪದನಾಮ / ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ ಮಂಜುನಾಥ್ | ಸಹ ಕಂದಾಯ ಅಧಿಕಾರಿ. ಅರಕೆರೆ ಉಪವಲಯ | ಹಾಜರಿದ್ದರು |
| 2 | ಶ್ರೀ ಮುನಿಕೃಷ್ಣ. ಜಿ | ಹಿರಿಯ ಆರೋಗ್ಯ ಪರಿವೀಕ್ಷಕರು. | ಹಾಜರಿದ್ದರು. |
| 3 | ಶ್ರೀ ಕೀರ್ತಿರಾಜ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿದ್ದರು |
| 4 | ಶ್ರೀ ಜಾನ್ ವಾಸ್ಕೋ | ಅರಕೆರೆ ಕೋವಿಡ್ ವಾರ್‌ರೂಂ ಅರಕೆರೆ | ಹಾಜರಿದ್ದರು |
| 5 | ಶ್ರೀ ಪ್ರಕಾಶ್ | ಕಂದಾಯ ವಸೂಲಿಗಾರರು | ಹಾಜರಿದ್ದರು |
| 6 | ಶ್ರೀ ಕೃಷ್ಣ | ಕಂದಾಯ ವಸೂಲಿಗಾರರು | ಹಾಜರಿದ್ದರು |
| 7 | ಶ್ರೀ ದೀಪಕ್ | ಕಂದಾಯ ವಸೂಲಿಗಾರರು | ಹಾಜರಿದ್ದರು |
| 8 | ಶ್ರೀ ಸಂತೋಷ್ | ಕಿರಿಯ ಅಭಿಯಂತರರು, ಬೆಸ್ಕಾಂ | ಹಾಜರಿದ್ದರು. |
| 9 | ಶ್ರೀ ದೇವೇಗೌಡ, ಟಿ.ಬಿ | ಕಿರಿಯ ಅಭಿಯಂತರರು. ಬೆಸ್ಕಾಂ | ಹಾಜರಿದ್ದರು. |
| 10 | ಶ್ರೀ ಶಿವಣ್ಣ, ಸೋಮಣ್ಣ, ಆದಿನಾರಾಯಣ್, ನಾರಾಯಣ ಸ್ವಾಮಿ, ನೀಲ ಪ್ರಸಾದ್ | ಕಸ ವಿಲೇವಾರಿ ಮೇಲ್ವಿಚಾರಕರು. | ಹಾಜರಿದ್ದರು |
| 11 | ಶ್ರೀ ರೂಪೇಶ್ | ಸಹ ನೋಡಲ್ ಅಧಿಕಾರಿಗಳು | ಹಾಜರಿದ್ದರು |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು/ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

| | |
|---|---|
| ವಿಷಯ-28 | ಹಿಂದಿನ ಸಭೆಯ ನಡವಳಿಯನ್ನು ಓದಿ ರೆಕಾರ್ಡ್ ಮಾಡುವುದು. |
| ತೀರ್ಮಾನ | ವಿಷಯ ಸಂಖ್ಯೆ 22 ರಿಂದ 27ರ ವರೆಗಿನ ಹಿಂದಿನ ಸಭೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ವಿಷಯ ಮತ್ತು ತೀರ್ಮಾನವನ್ನು ಓದಿ ರೆಕಾರ್ಡ್ ಮಾಡಲಾಯಿತು. |

**29. ಆರೋಗ್ಯ/ಘನ ತ್ಯಾಜ್ಯ ಇಲಾಖೆ :-** ವಾರ್ಡ್ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ಕಸವಿಲೇವಾರಿಯ ಬಗ್ಗೆ ಮಾಹಿತಿಯನ್ನು ಕಿರಿಯ ಆರೋಗ್ಯ ಪರಿವೀಕ್ಷಕರು ನೀಡಿದರು ಹಾಗೂ ಹಾಲಿ ವಾರ್ಡ್ ವ್ಯಾಪ್ತಿಯಲ್ಲಿ ಇರುವ ಘನ ತ್ಯಾಜ್ಯಕ್ಕೆ ಸಂಬಂಧಿಸಿದ ಈ ಕೆಳಕಂಡ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಹೊಸದಾಗಿ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಹೊಸ ಗುತ್ತಿಗೆದಾರರು ಕಾರ್ಯದೇಶ ಪಡೆದಿರುತ್ತಾರೆ ಹಾಗೂ ದಿನಾಂಕ 21.12.2020 ರಿಂದ ಕೆಲಸ ಪ್ರಾರಂಭಿಸಿರುತ್ತಾರೆಂದು ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ತಿಳಿಸಿದರು.

**30. ಕಾಮಗಾರಿ ಇಲಾಖೆ:-** ಅರಕೆರೆ ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಹಾಗೂ ಬೃಹತ್ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳು ತುರ್ತಾಗಿ ಮುಚ್ಚುವುದಕ್ಕೆ ಕ್ರಮ ಕೈಗೊಳ್ಳಲು ಕಳೆದ ಸಭೆಯಲ್ಲಿ ಸೂಚಿಸಿರುವುದಾಗಿ ಮಾನ್ಯ ಅಧ್ಯಕ್ಷರು ತಿಳಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ಬಿದ್ದಿರುವ ಗುಂಡಿ ಮುಚ್ಚುವ ಕಾಮಗಾರಿಯು ಪ್ರಗತಿಯಲ್ಲಿರುವುದಾಗಿ ಹಾಗೂ ಪೋಲೀಸ್ ಟ್ರಾಫಿಕ್ ಸೆಲ್‌ನಿಂದ ಬಂದಿರುವ ದೂರುಗಳನ್ವಯ ರಸ್ತೆಗುಂಡಿಗಳನ್ನು ಮುಚ್ಚಲಾಗಿರುತ್ತದೆ.

ವಾರ್ಡ್ ವ್ಯಾಪ್ತಿಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇಂಜಿನಿಯರಿಂಗ್ ಇಲಾಖೆಯ ಅಧಿಕಾರಿಗಳೊಂದಿಗೆ ಪ್ರತ್ಯೇಕವಾಗಿ ಸಭೆಯನ್ನು ನಡೆಸಿ ಕಾಮಗಾರಿಗಳ ಪ್ರಗತಿಯ ಬಗ್ಗೆ ಪರಿಶೀಲಿಸುವುದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿದರು.

**32. ಕೋವಿಡ್19ರ ಸಾಂಕ್ರಮಿಕ ರೋಗದ ಬಗ್ಗೆ:-** ಅರಕೆರೆ ವಾರ್ಡ್ ವ್ಯಾಪ್ತಿಯ ನೋಡಲ್ ಅಧಿಕಾರಿಗಳು ಹಾಜರಿದ್ದು ಕೋವಿಡ್-19ರ ಟೆಸ್ಟಿಂಗ್ ಕ್ಯಾಂಪ್‌ಗಳ ಬಗ್ಗೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆಯುತ್ತಿರುವ ಟೆಸ್ಟಿಂಗ್‌ನ ಮಾಹಿತಿಯನ್ನು ಸಭೆಗೆ ವಿವರಿಸಿದರು.

ಅರಕೆರೆ ವಾರ್ಡ್ ವ್ಯಾಪ್ತಿಯಲ್ಲಿ ಡಿಸಂಬರ್ ತಿಂಗಳಲ್ಲಿ ಪ್ರತಿದಿನ ಅಂದಾಜು 300 ಟೆಸ್ಟಿಂಗ್‌ಗಳಾಗುತ್ತಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಪ್ರಸ್ತುತ 02 ಆ್ಯಕ್ಟೀವ್ ಕೇಸ್‌ಗಳು ಇರುವುದಾಗಿ ಸಭೆಗೆ ತಿಳಿಸಿದರು.

ಕೋವಿಡ್ ವಾರ್ ರೂಂ ಅನ್ನು ಅರಕೆರೆಯ ಪ್ರಥಾಮಿಕ ಆರೋಗ್ಯ ಕೇಂದ್ರಕ್ಕೆ ವರ್ಗಾಹಿಸಲಾಗಿದ್ದು ಸದರಿ ವಾರ್ ರೂಂನಲ್ಲಿ ಚೇರ್‌ಗಳ ವ್ಯವಸ್ಥೆ ಮಾಡಿಕೊಡಬೇಕಾಗಿ ತಿಳಿಸಿದರು.

ಅರಕೆರೆಯಲ್ಲಿ ಇರುವ ಪ್ರಥಾಮಿಕ ಕೇಂದ್ರಕ್ಕೆ ಗ್ರೂಪ್-ಡಿ ನೌಕರರ ಅವಶ್ಯಕತೆ ಇದ್ದು ಹಾಗೂ ಆರೋಗ್ಯ ಕೇಂದ್ರಕ್ಕೆ ಕಾವೇರಿ ಸಂಪರ್ಕ ಕಲ್ಪಿಸಿಕೊಡಬೇಕಾಗಿ ಸಭೆಯಲ್ಲಿ ಹಾಜರಿದ್ದ ಆರೋಗ್ಯಾಧಿಕಾರಿಗಳು ಕೋರಿದರು.

**33. ವಾರ್ಡ್ ವ್ಯಾಪ್ತಿಯ ವಿವಿಧ ಇಲಾಖೆಗಳ ಪ್ರಗತಿಯಲ್ಲಿರುವ ಕಾಮಗಾರಿಗಳ ಬಗ್ಗೆ ಚರ್ಚಿಸುವುದು.**

- ಅರಣ್ಯ ಇಲಾಖೆ:- ಅರಕೆರೆ ಮೈಕೋ ಬಡಾವಣೆಯ ಆಟದ ಮೈದಾನದಲ್ಲಿ ಬೀಳುವ ಹಂತದಲ್ಲಿರುವ ದೊಡ್ಡದಾದ ಮರಗಳನ್ನು ತಕ್ಷಣ ತೆಗೆಯಲು ಬಡಾವಣೆಯ ನಿವಾಸಿಗಳು ಕೋರಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಅರಣ್ಯಾಧಿಕಾರಿಗಳು ತುರ್ತಾಗಿ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

- ಬೆಸ್ಕಾಂ ಇಲಾಖೆ:- ಬೆಸ್ಕಾಂ ಇಲಾಖೆಯ ವತಿಯಿಂದ ವಿದ್ಯುತ್ ಕಂಬಗಳ ದುರಸ್ಥಿ ಸಮಯದಲ್ಲಿ ಅಡ್ಡಲಾಗಿ ಇರುವ ಮರದ ಕೊಂಬೆಗಳನ್ನು ಕತ್ತರಿಸಿ ರಸ್ತೆಯ ಬದಿಯಲ್ಲಿ ಹಾಗೆ ಬಿಟ್ಟಿರುವುದಾಗಿ ಇದರಿಂದ ರಸ್ತೆ ಸ್ವಚ್ಛತಾ ಕಾರ್ಯಕ್ಕೆ ತೊಂದರೆಯಾಗುತ್ತಿರುವುದಾಗಿ ಕಿರಿಯ ಆರೋಗ್ಯ

ಪರಿವೀಕ್ಷಕರು ಸಭೆಗೆ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳು ಸ್ಥಳ ತಿಳಿಸಿದರೆ ಕೂಡಲೇ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿದ್ಯುತ್ ಸಮಸ್ಯೆಯನ್ನು ತುರ್ತಾಗಿ ಸರಿಪಡಿಸುವುದಾಗಿ ಹಾಜರಿದ್ದ ಅಧಿಕಾರಿಗಳು ತಿಳಿಸಿದರು.

- ಕಂದಾಯ ಇಲಾಖೆ:- ಕಂದಾಯ ಇಲಾಖೆ ಕಛೇರಿಯಲ್ಲಿ ಕಂದಾಯ ವಸೂಲಿ ಕಾರ್ಯ ಸಮರ್ಪಕವಾಗಿ ನಡೆಯುತ್ತಿರುತ್ತದೆ.

  ಅರಕೆರೆ ವ್ಯಾಪ್ತಿಯ ಆಸ್ತಿ ತೆರಿಗೆ ಕಡಿಮೆ ಘೋಷಣೆ ಮಾಡಿಕೊಂಡಿರುವ ಕಟ್ಟಡಗಳ ಮರು ಸರ್ವೇ ಮಾಡಿಸಿ ಲೆಕ್ಕಾಚಾರ ಮಾಡಿ ವ್ಯತ್ಯಾಸದ ಮೊತ್ತವನ್ನು ಮರು ಪಾವತಿಸಿಕೊಳ್ಳುವುದಾಗಿ, ಹಾಜರಿದ್ದ ಸಹ ಕಂದಾಯ ಅಧಿಕಾರಿರವರು ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆ ಚರ್ಚಿಸಿದ ವಿಚಾರ.

ಮಾನ್ಯ ಆಯುಕ್ತರ ಆದೇಶದಂತೆ 2021-22ನೇ ಸಾಲಿನ ಆಯವ್ಯಯಕ್ಕೆ **"MY CITY MY BUDGET"** ಶೀರ್ಷಿಕೆಯಡಿಯಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ, ಪಾದಚಾರಿ ಮಾರ್ಗಗಳ ನಿರ್ಮಾಣದ ಹಾಗೂ ಸ್ಥಳ ಗುರುತಿಸುವ ಬಗ್ಗೆ ರೆಸಿಡೆನ್ಸಿಯಲ್ ಕ್ಷೇಮಾಭಿವೃದ್ಧಿ ಸಂಘ ಸಂಸ್ಥೆಗಳು ಹಾಗೂ ನಿವಾಸಿಗಳಿಂದ ಸಲಹೆಗಳನ್ನು ನೀಡಲು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿರುತ್ತಾರೆ.

ಅರಕೆರೆ ವಾರ್ಡ್ ವ್ಯಾಪ್ತಿಗೆ ಹಾಲಿ ಇದ್ದ ಸಹಾಯಕ ಅಭಿಯಂತರರು, ನಿವೃತ್ತಿ ಹೊಂದಿದ್ದು ಕೂಡಲೇ ಖಾಯಂ ಅಭಿಯಂತರರನ್ನು ನಿಯೋಜಿಸಲು ಮೇಲಾಧಿಕಾರಿಗಳ ಗಮನಕ್ಕೆ ತರಲು ಸಭೆಯಲ್ಲಿ ತೀರ್ಮಾನಿಸಲಾಯಿತು.

- ಬನ್ನೇರುಘಟ್ಟ ರಸ್ತೆಯಲ್ಲಿ ಮೆಟ್ರೋ ಕಾಮಗಾರಿ ಪ್ರಗತಿಯಲ್ಲಿದ್ದು ಇದರಿಂದ ಸಾರ್ವಜನಿಕರು ಹಾಗೂ ವಾಹನ ಸಂಚಾರಕ್ಕೆ ಆಗುತ್ತಿರುವ ತೊಂದರೆಗಳನ್ನು ಕೂಡಲೇ ಸರಿಪಡಿಸಲು ಬಿ.ಎಂ.ಆರ್.ಸಿ.ಎಲ್ ಅಧಿಕಾರಿಗಳಿಗೆ ಪತ್ರ ಬರೆಯಲು ಮಾನ್ಯ ಅಧ್ಯಕ್ಷರು ಕಾಮಗಾರಿ ಇಲಾಖೆರವರಿಗೆ ಸೂಚಿಸಿರುತ್ತಾರೆ.
- ಬನ್ನೇರುಘಟ್ಟ ಮುಖ್ಯ ರಸ್ತೆಯ ಹುಳಿಮಾವು ಗೇಟ್ ಬಳಿ ಅರಕೆರೆ ಕೆರೆಗೆ ನೀರು ಬರಲು ಹಾಲಿ ಇರುವ ಕಲ್ವರ್ಟ್ ಮೇಲೆ ಕವರಿಂಗ್ ಇಲ್ಲದ ಕಾರಣ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು ಹಾಗೂ ಮಳೆ ಬಂದಾಗ ಹುಳಿಮಾವು ಬಸ್ ನಿಲ್ದಾಣದ ಹತ್ತಿರ ನೀರು ನಿಂತು ವಾಹನ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿರುತ್ತದೆ. ಈ ಬಗ್ಗೆ ಈಗಾಗಲೇ ಟ್ರಾಫಿಕ್ ಪೋಲೀಸ್ ಇಲಾಖೆ ಅಧಿಕಾರಿಗಳು ಸಹ ದೂರು ನೀಡಿರುತ್ತಾರೆ.

ಕಾರ್ಯದರ್ಶಿಯವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಸಿ.ಟಿ ಅಂಜನಪ್ಪ) 19/12/2020
ಸಹಾಯಕ ಕಾರ್ಯಪಾಲಕ ಅಭಿಯಂತರರು
ಅರಕೆರೆ ಉಪವಿಭಾಗ.

(ಟಿನ್ ರಮೇಶ್)
ನೋಡಲ್ ಅಧಿಕಾರಿ,
ವಾರ್ಡ್ ನಂ 193